ಓ.ಎಸ್. ನಂ. 277/2014
ಪಿ ಡಬ್ಲ್ಯೂ -2

**ಸಾಕ್ಷಿಯನ್ನು ದಿನಾಂಕ: 12-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ವಾಟೀಸವಾಲು 2ಮತ್ತು 3ನೇ ಪ್ರತಿವಾದಿ ಪರ ವಕೀಲರಾದ ಶ್ರೀ DGT ರವರಿಂದ**

**1.** ನಾನು ಹುಟ್ಟಿದಾಗಿನಿಂದಲೂ ಕರಕಲಗಟ್ಟದಲ್ಲಿ ವಾಸ ಮಾಡುತ್ತಿರುತ್ತೇನೆಂದರೆ ಸರಿ. ನಮ್ಮ ಗ್ರಾಮದಿಂದ ಲಕ್ಕೆನಹಳ್ಳಿ ಗ್ರಾಮಕ್ಕೆ 3 ಮೈಲಿ ಅಂತರವಾಗುತ್ತದೆ. ಹೊಳವನಹಳ್ಳಿ ಗ್ರಾಮದಿಂದ ನಮ್ಮ ಗ್ರಾಮಕ್ಕೆ 1 ಮೈಲಿಗಿಂತ ಕಮ್ಮಿ ಇರುತ್ತದೆ. ವಾದಿಗಳು ನಮ್ಮ ದೂರದ ಸಂಬಂದಿಕರು ಹಾಗೂ ಅವರು ಮತ್ತು ನಾನು ಎದುರುಬದುರು ಮನೆಯಲ್ಲಿ ವಾಸ ಮಾಡುತ್ತಿರುತ್ತೇವೆ. ದಾವಾ ಆಸ್ತಿಗಳು ಪ್ರತಿವಾದಿಗಳ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಿಪಿ-1 ರ ಸಮಯದಲ್ಲಿ ಪ್ರತಿವಾದಿ 1 ರಿಂದ 3 ರವರ ತಾಯಿ ಜೀವಂತ ಇದ್ದರು ಎಂದರೆ ಸರಿ. 2006 ನೇ ಇಸವಿಯಲ್ಲಿ ದಾವಾ ಆಸ್ತಿಗಳ ಖಾತೆಗಳು ಪ್ರತಿವಾದಿ 1 ರಿಂದ 3 ರವರ ತಾಯಿ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ಸರಿ. ನಿಪಿ-1 ನ್ನು ಪ್ರತಿವಾದಿ 1 ರಿಂದ 3 ರವರ ತಾಯಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. 2006 ನೇ ಇಸವಿಯಲ್ಲಿ ಪ್ರತಿವಾದಿ 1 ರಿಂದ 3 ರವರ ಮಕ್ಕಳು ವಯಸ್ಕರಾಗಿದ್ದರು ಎಂದರೆ ಕೆಲವರು ವಯಸ್ಕರಾಗಿದ್ದರು, ಕೆಲವರು ವಯಸ್ಕರಾಗಿರಲಿಲ್ಲ. ಪ್ರತಿವಾದಿ 1 ರಿಂದ 3 ರವರ ಮಕ್ಕಳು ನಿಪಿ-1 ನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. 2006 ನೇ ಸಾಲಿನಲ್ಲಿ ಹೊಳವನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 1 ಎಕರೆ ಜಮೀನಿನ 3 ರಿಂದ 4 ಲಕ್ಷ ಬೆಲೆಬಾಳುತ್ತಿತ್ತು ಎಂದರೆ ಸರಿಯಲ್ಲ. 50 ಸಾವಿರಕ್ಕಿಂತ ಕಡಿಮೆ ಬೆಲೆ ಬಾಳುತ್ತಿತ್ತು.

2. ಕರಕಲಗಟ್ಟ ಗ್ರಾಮದಲ್ಲಿ ನಮ್ಮ ತಂದೆಗೆ ಸೇರಿದ 2 ರಿಂದ 2 ½ ಎಕರೆ ಜಮೀನು ಇತ್ತು. 2006 ನೇ ಸಾಲಿನಲ್ಲಿ ನಮ್ಮ ಜಮೀನನ್ನು 50 ಸಾವಿರ ರೂಪಾಯಿಗೂ ಕೇಳುವವರಿರಲಿಲ್ಲ. ನಿಪಿ-1 ನ್ನು ಬರೆದುಕೊಡುವ ಮೊದಲು ಜಮೀನಿನ ವ್ಯವಹಾರ ನನ್ನ ಸಮಕ್ಷಮ ಜರುಗಿರುವುದಿಲ್ಲ. ನಿಪಿ-1 ಕ್ಕೆ ನಾನು ಸಹಿ ಮಾಡಿದಾಗ ಸದರಿ ದಾಖಲೆಯಲ್ಲಿ ಬರವಣಿಗೆ ಆಗಿದ್ದು ಸದರಿ ಬರವಣಿಗೆಯಲ್ಲಿ ಮಲ್ಲಣ್ಣರವರು ಮಾಡಿಸಿಕೊಂಡು ಬಂದಿರುತ್ತಾರೆ. ಸದರಿ ಬರವಣಿಗೆ ಮಾಡಿದ ದಾಖಲೆಯು Excise ಪುಸ್ತಕ ಇದ್ದ ಹಾಗೆ ಇತ್ತು. ನಾನು ಪುಸ್ತಕಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ, ಸಾಕ್ಷಿಯು ಮುಂದೂವರೆದು ನಾನು ಸಹಿ ಮಾಡಿದ ದಾಖಲೆಯು ಪುಸ್ತಕವಾಗಿರುತ್ತದೆಯೋ ಬೇರೆ ದಾಖಲೆಯಾಗಿರುತ್ತದೆಯೋ ಅಷ್ಟಾಗಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಕುತ್ತಿದ್ದ ಜಾಗದಲ್ಲಿ ನನ ಸಮಕ್ಷಮದಲ್ಲಿ ಯಾವುದೇ ಮಾತುಕತೆ ಯಾಗಿರುವುದಿಲ್ಲ ಎಂದರೆ ಸರಿ. ನನ್ನ ಜೊತೆಗೆ ರಾಮಲಿಂಗಯ್ಯ ಮತ್ತು ಶಿವಲಿಂಗಯ್ಯ ಸಹಿ ಮಾಡಿರುತ್ತಾರೆ. ನಾನು ಮತ್ತು ಸದರಿಯವರನ್ನು ಬಿಟ್ಟು ಬೇರೆ ಯಾರು ನನ್ನ ಸಮಕ್ಷಮದಲ್ಲಿ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ . ಪತ್ರಕ್ಕೆ ಯಾರು ಮೊದಲು ಸಹಿ ಮಾಡಿರುತ್ತಾರೋ ನನ್ನಿಂದ ಹೇಳಲು ಆಗುವುದಿಲ್ಲ. ನಾನು, ರಾಮಲಿಂಗಯ್ಯ ಮತ್ತು ಶಿವಲಿಂಗಯ್ಯ ರವರು ಒಂದೇ ಪೆನ್ನಿನಲ್ಲಿ ಸಹಿ ಮಾಡಿರುತ್ತೇವೋ, ಬೇರೆ ಬೇರೆ ಪೆನ್ನಿನಲ್ಲಿ ಸಹಿ

ಮಾಡಿರುತ್ತೇವೋ ನನ್ನಿಂದ ಹೇಳಲು ಆಗುವುದಿಲ್ಲ. ಎಷ್ಟು ರೂಪಾಯಿ ಮುಖಬೆಲೆ ನೋಟುಗಳನ್ನು ನೀಡಿರುತ್ತಾರೆಂದು ನನ್ನಿಂದ ಹೇಳಲು ಆಗುವುದಿಲ್ಲ.

3. 3ನೇ ಪ್ರತಿವಾದಿಯ ಅಳಿಯ ವೆಂಕಟೇಶ ರವರ ದಾವಾ ಆಸ್ತಿಗಳಲ್ಲಿ ಬೆಳೆಗಳನ್ನು ಇಟ್ಟುರುತ್ತಾರೆಂದರೆ ಸರಿ. ನಾನು ನಿಪಿ-1 ಕ್ಕೆ ಸಹಿ ಮಾಡದೇ ಇದ್ದರು ನಾನು ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಿಪಿ-1 ನ್ನು ನಾನು, ವಾದಿಗಳು ಹಾಗೂ ರಾಮಲಿಂಗಯ್ಯ ಮತು ಶಿವಲಿಂಗಯ್ಯ ರವರು ಸೇರಿಕೊಂಡು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಸಿರಗೋನಹಳ್ಳಿ, ಹೊಳವನಹಳ್ಳಿ ಮತ್ತು ಲಂಕೇನಹಳ್ಳಿ ಗ್ರಾಮಗಳಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ಸೇರಿದ ಆಸ್ತಿಗಳು ಇರುತ್ತವೆಂದರೆ ಸರಿ. 1 ನೇ ಪ್ರತಿವಾದಿ ಮಲ್ಲೇನಹಳ್ಳಿ ಗ್ರಾಮದ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಾರೆಂದರೆ ಸರಿ. 2ನೇ ಪ್ರತಿವಾದಿ ಸಿರಗೋನಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಾರೆಂದರೆ ಸರಿ. 3ನೇ ಪ್ರತಿವಾದಿ ಹೊಳವನಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಿರುತ್ತಾರೆಂದರೆ ಸರಿ. ದಾವಾ ಆಸ್ತಿಗಳು 3ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದು ಅವರೇ ವ್ಯವಸಾಯ ಮಾಡುತ್ತಿದ್ದು ಪ್ರತಿವಾದಿ 1 ಮತ್ತು 2 ರವರಿಗೆ ಸದರಿ ಆಸ್ತಿಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಹಾಗೂ ಪ್ರತಿವಾದಿ 1 ರಿಂದ 3 ರವರು ನಿಪಿ-1 ನ್ನು ವಾದಿಗಳಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ವಿಚಾರ ನನಗೆ ಏನೂ ಗೊತ್ತಿಲ್ಲದಿದ್ದರೂ ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**Sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**